# DPUE

# KANNADA

# NOTES

DPUE

# ಬಸವಣ್ಣನವರ ವಚನಗಳು

ಸಾರಾಂಶ

ಭಕ್ತಿ ಭಂಡಾರಿ ಬಸವಣ್ಣನವರ ಮೂರು ವಚನಗಳನ್ನು ಪ್ರಸ್ತುತ ಪಠ್ಯಭಾಗದಲ್ಲಿ ನೀಡಲಾಗಿದೆ.

ಮೊದಲನೆಯ ವಚನ :

ನೈಜಭಕ್ತಿಯ ಸ್ವರೂಪವನ್ನು ಕುರಿತು ಹೇಳುತ್ತದೆ.

- ದೇವ ಮತ್ತು ಭಕ್ತ ಇವರಿಬ್ಬರ ಮನಗಳು ಬೆರೆತಾಗ ತನು ಕರಗಬೇಕು ಅಂದರೆ ಭಕ್ತನಾದವನ ಅಹಂಕಾರ ಕರಗಬೇಕು.
- ಭಕ್ತನಾದವನು ದೇವ/ಶಿವಲಿಂಗವನ್ನು ಸ್ಪರ್ಶಿಸಿದಾಗ ಆತನ ದೇಹ ರೋಮಾಂಚನಗೊಳ್ಳುವಂತಿರಬೇಕು.
- ದು:ಖದ ಸನ್ನಿವೇಶಗಳನ್ನು ಕಂಡಾಗ ಕಣ್ಣೀರು ಬರುವಂತಿರಬೇಕು
- ದೇವರ ಸ್ತುತಿ, ಶ್ಲೋಕ ಇತ್ಯಾದಿ ಪಠಣ ಮಾಡುವುದರ ಮೂಲಕ ಭಕ್ತನಾದವನ ಗಂಟಲು ಗದ್ಗದವಾಗುವಂತಿರಬೇಕು.

- ಇವೆಲ್ಲವೂ ನೈಜ ಭಕ್ತಿಯ ಲಕ್ಷಣಗಳು. ಆದರೆ ಇವೆಲ್ಲ ನನ್ನಲ್ಲಿ ಇಲ್ಲ ಎಂದು ಹೇಳಿಕೊಳ್ಳುತ್ತಾ ತಾನೊಬ್ಬ ಡಾಂಭಿಕ ಭಕ್ತ ಎಂದು ಕರೆದು ಕೊಂಡಿದ್ದಾನೆ.

ವಿಮರ್ಶೆ : ವಾಸ್ತವವಾಗಿ ಬಸವಣ್ಣನು ನೈಜಭಕ್ತಿಯ ಸ್ವರೂಪವುಳ್ಳ ವ್ಯಕ್ತಿಯಾದರೂ ತಾನೊಬ್ಬ ಡಾಂಭಿಕ ಎಂದು ಹೇಳಿಕೊಳ್ಳುವುದರ ಮೂಲಕ ಭಕ್ತಿಯ ಪರಾಕಾಷ್ಠೆಯನ್ನು ಇಲ್ಲಿ ಪ್ರದರ್ಶಿಸಿದ್ದಾನೆ. ಅಲ್ಪನಾದವನು ತನ್ನಲ್ಲಿ ಐಶ್ವರ್ಯವೇ ಇದೆ ಎಂದು ಬಡಾಯಿ ಕೊಚ್ಚಿಕೊಳ್ಳುವ ಇಂದಿನ ಜಗತ್ತಿನಲ್ಲಿ ಬಸವಣ್ಣನು ಭಕ್ತಿಯ ಐಶ್ವರ್ಯವೇ ತನ್ನಲ್ಲಿ ಇದ್ದರೂ ನೈಜಭಕ್ತನ ಅಲ್ಪಲಕ್ಷಣವೂ ನನ್ನಲ್ಲಿಲ್ಲ ಎಂದು ಹೇಳಿಕೊಳ್ಳುವುದನ್ನು ಗಮನಿಸಿದರೆ ಆತನ ಅನನ್ಯವಾದ ಭಕ್ತಿಯ ಪರಿಚಯವಾಗುತ್ತದೆ.

ಎರಡನೆಯ ವಚನ

ಎರಡನೆಯ ವಚನದಲ್ಲಿಯೂ ಕೂಡ ನೈಜಭಕ್ತಿಯ ಸ್ವರೂಪವನ್ನು ಕುರಿತು ಹೇಳುತ್ತಾ ಶಿವಪಥವನ್ನರಿಯಬೇಕಾದ ಮಹತ್ವವನ್ನು ಅನೇಕ ದೃಷ್ಟಾಂತಗಳ ಮೂಲಕ ಮತ್ತಷ್ಟು ಸ್ಪಷ್ಟೀಕರಿಸುತ್ತಾನೆ.

- ಮಾನವನಿಗೆ ಶ್ರೀಮಂತಿಕೆ ಇದ್ದರೆ ಮಾತ್ರ ಸಾಲದು ಅದರ ಜೊತೆಗೆ ಅದನ್ನು ಅನುಭವಿಸಲು ಆಯುಷ್ಯವೂ ಹೇಗೆ ಮುಖ್ಯವೋ
- ಒಬ್ಬ ಹೇಡಿಯಾದವನ ಕೈಯಲ್ಲಿ ಚಂದ್ರಾಯುಧವಿದ್ದರೆ ಹೇಗೆ ಅದು ನಿಷ್ಪ್ರಯೋಜಕವೋ
- ಕುರುಡನ ಕೈಯಲ್ಲಿ ಕನ್ನಡಿ ಇದ್ದರೆ ಅವನಿಗೆ ಹೇಗೆ ಲಾಭವಿಲ್ಲವೋ
- ಮಂಗನಕೈಯಲ್ಲಿ ಮಾಣಿಕ್ಯದಂತಹ ಬೆಲೆಬಾಳುವ ಲೋಹವಿದ್ದರೂ ಆ ಮಂಗನಿಗೆ ಅದರ ಬೆಲೆ ತಿಳಿಯಲಾರದೋ

ಹಾಗೆಯೇ ಶಿವಪಥ (ಸತ್ಪಥ/ಸನ್ಮಾರ್ಗ/ನೈಜ ಭಕ್ತನಪಥ) ವನ್ನರಿಯದವನ ಕೈಯಲ್ಲಿ ಲಿಂಗವಿದ್ದರೆ ಯಾವ ಪ್ರಯೋಜನವೂ ಇಲ್ಲ.

ವಿಮರ್ಶೆ : ಭಕ್ತನಾದವನಿಗೆ ಬೇಕಾದುದು ಅಂತರಂಗದ ನಿಷ್ಕಲ್ಮಶವಾದ ಸೌಂದರ್ಯವೇ ಹೊರತು ಬಾಹ್ಯವಾದ ವೇಷಭೂಷಣಗಳಲ್ಲ. ತನ್ನ ಅಂತರಾಳದಲ್ಲಿ ನೈಜಭಕ್ತಿಯನ್ನು ಹೊಂದಿರುವವರು ಮಾತ್ರ ಶಿವಪಥವನ್ನು ಅರಿತು ದೇವರ ಕೃಪೆಗೆ ಪಾತ್ರರಾಗುತ್ತಾರೆ.

ಮೂರನೇಯ ವಚನ

ರಕ್ಷಕರಾದವರೇ ಭಕ್ಷಕರಾದರೆ ನಮ್ಮನ್ನು ರಕ್ಷಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದನ್ನು ಅನೇಕ ದೃಷ್ಟಾಂತಗಳಿಂದ ವಿವರಿಸಿದ್ದಾನೆ.

- ಮನೆಯಲ್ಲಿರುವ ಒಲೆಯು ಹೊತ್ತಿ ಉರಿಯುತ್ತಿರುವಾಗ ಅದರ ಶಾಖವನ್ನು ಸಹಿಸಿಕೊಳ್ಳಬಹುದು. ಆದರೆ ಭೂಮಿಯೇ ಹೊತ್ತಿ ಉರಿದರೆ! ನಾವು ಜೀವಿಸಲು ಸಾಧ್ಯವೇ?
- ನೀರನ್ನು ಸಂಗ್ರಹಿಸಲು ಮಾಡಿದ ಕಟ್ಟೆ(ಮಣ್ಣಿನದಿಬ್ಬ)ಯೇ ನೀರನ್ನು ಕುಡಿದರೆ!
- ಬೆಳೆಗಳನ್ನು ರಕಿಸಲೆಂದು ಮಾಡಿದ ಬೇಲಿಯೇ ಪೈರುಗಳನ್ನು ತಿಂದರೆ!
- ಹಸುಳೆಗೆ ತನ್ನ ತಾಯಿಯ ಎದೆಹಾಲೇ ವಿಷವಾದರೆ !
- ಗೃಹಿಣಿಯಾದವಳು ತನ್ನ ಮನೆಯಲ್ಲಿ ಕಳ್ಳತನ ಮಾಡಿದರೆ !
- ಹಾಗೆಯೆ ರಕ್ಷಿಸಬೇಕಾದ ದೇವರೇ ನಮಗೆ ಕಷ್ಟ ಕೊಟ್ಟರೆ ನಾವು ಯಾರಲ್ಲಿ ನಮ್ಮ ಕಷ್ಟಗಳನ್ನು ಹೇಳಿಕೊಳ್ಳಬೇಕು.

ವಿಮರ್ಶೆ : ವಾಸ್ತವವಾಗಿ ಈ ಮೇಲಿನ ಎಲ್ಲ ದೃಷ್ಟಾಂತಗಳೂ ಅಸಾಧ್ಯವಾದವುಗಳು. ಒಂದು ವೇಳೆ ಅವು ಸಾಧ್ಯವಾಗುವಂತಾದರೆ ನಮಗೆ ಜೀವಿಸಿರಲು ಖಂಡಿತ ಸಾಧ್ಯವಿಲ್ಲ. ಈ ವಿಚಾರವನ್ನು ಅರಿತು ನಾವು ಅಹಂಕಾರ ಪಡದೆ, ಡಾಂಬಿಕರಾಗದೆ ನೈಜಭಕ್ತರಾಗಿ ಪ್ರಕೃತಿರಹಸ್ಯವನ್ನು ಅರಿತು ಬದುಕಬೇಕು

ಒಂದು ವಾಕ್ಯದ ಪ್ರಶ್ನೋತ್ತರಗಳು

1. ತನು ಯಾವಾಗ ಕರಗಬೇಕು ?

   ಉತ್ತರ : ಮನಮನ ಬೆರೆತಾಗ ತನು ಕರಗಬೇಕು.

2. ಯಾರ ಕೈಯಲ್ಲಿ ದರ್ಪಣವಿದ್ದು ಪ್ರಯೋಜನವಿಲ್ಲ ?

   ಉತ್ತರ ಅಂಧಕನ ಕೈಯಲ್ಲಿ ದರ್ಪಣವಿದ್ದು ಪ್ರಯೋಜನವಿಲ್ಲ.

3. ಶಿವಪಥವನ್ನು ಅರಿಯದಿದ್ದರೇನಾಗುವುದು ?

   ಉತ್ತರ : ಶಿವಪಥವನ್ನು ಅರಿಯದವನ ಕೈಯಲ್ಲಿ ಲಿಂಗವಿದ್ದು ಪ್ರಯೋಜನವಿಲ್ಲ.

4. ಬಸವಣ್ಣನವರ ವಚನಗಳ ಅಂಕಿತ ಯಾವುದು ?

   ಉತ್ತರ : ಬಸವಣ್ಣನವರ ವಚನಗಳ ಅಂಕಿತ ಕೂಡಲಸಂಗಮದೇವ.

ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸುವ ಉತ್ತರಗಳು

1. ಯಾವಗುಣಗಳಿಲ್ಲದವನು ಡಾಂಬಿಕನೆನಿಸುತ್ತಾನೆ?
   ಉತ್ತರ : ಮನಮನ ಬೆರೆಸಿದಾಗ ಯಾರಲ್ಲಿ ತನುಕರಗುವುದಿಲ್ಲವೋ, ಸ್ಪರ್ಶಿಸಿದಾಗ ಯಾರಲ್ಲಿ ರೋಮಾಂಚನ ವಾಗುವುದಿಲ್ಲವೋ, ದು:ಖದ ದೃಶ್ಯಗಳನ್ನು ಕಂಡಾಗ ಯಾರಲ್ಲಿ ಕಣ್ಣೀರು ಸುರಿಯುವುದಿಲ್ಲವೋ, ಮಾತಾಡಿ ಮಾತಾಡಿ ಯಾರ ಗಂಟಲು ಗದ್ಗದವಾಗುವಿದಿಲ್ಲವೋ ಅಂತವರು ಡಾಂಬಿಕರೆನಿಸುತ್ತಾರೆ.
2. ಶಿವಪಥವನ್ನರಿಯದವರನ್ನು ಹೇಗೆ ವಿಡಂಬಿಸಲಾಗಿದೆ?
   ಉತ್ತರ : ಯಾರಲ್ಲಿ ಐಶ್ವರ್ಯಗಳಿದ್ದು ಆಯುಷ್ಯವೇ ಇರುವುದಿಲ್ಲವೋ, ಹೇಡಿಯಾದವನ ಕೈಯಲ್ಲಿ ಚಂದ್ರಾಯುಧವಿದ್ದು ಅದು ಹೇಗೆ ನಿಷ್ಪ್ರಯೋಜಕವೋ, ಕುರುಡನ ಕೈಯಲ್ಲಿ ಕನ್ನಡಿ ಇದ್ದರೆ ಅವನಿಗೆ ಹೇಗೆ ಲಾಭವಿಲ್ಲವೋ (ಇತ್ಯಾದಿ) ಹಾಗೆಯೇ ಶಿವಪಥವನ್ನರಿಯದವನ ಕೈಯಲ್ಲಿ ಲಿಂಗವಿದ್ದು ಪ್ರಯೋಜನವಿಲ್ಲ.

3. ಯಾವಾಗ ನಿಲಬಹುದು? ಯಾವಾಗ ನಿಲಲಾಗದು?
   ಉತ್ತರ : ಒಲೆಹತ್ತಿ ಉರಿದರೆ ನಿಲಬಹುದು. ಧರೆ ಹತ್ತಿ ಉರಿದರೆ ನಿಲಲಾಗದು.

ಸಂದರ್ಭ ಮತು ಸ್ವಾರಸ್ಯದೊಡನೆ ಉತ್ತರಿಸಿರಿ

1. 'ಅರ್ಥರೇಖೆ ಇದ್ದು ಫಲವೇನು, ಆಯುಷ್ಯ ರೇಖೆ ಇಲ್ಲದನ್ನಕ್ಕರ'.
   ಉತ್ತರ :
   ಆಯ್ಕೆ : ಪದ್ಯಭಾಗ : ವಚನಗಳು
   ವಚನಗಾರ : ಬಸವಣ್ಣ
   ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಬಸವಣ್ಣನವರು ಹೇಳಿದ್ದಾರೆ.

ಸಂದರ್ಭ : ಶಿವಪಥವನ್ನು ಅರಿತು ಕೊಳ್ಳದ ಲಿಂಗಧಾರಿಗಳು ಡಾಂಭಿಕರು. ಇಂತಹ ಡಾಂಭಿಕರ ಕಪಟ ಭಕ್ತಿಯನ್ನು

ಅನೇಕ ದೃಷ್ಟಾಂತಗಳ ಮೂಲಕ ಹೇಳುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ಭಕ್ತನಾದವನಿಗೆ ಬೇಕಾದುದು ಅಂತರಂಗದ ನಿಷ್ಕಲ್ಮಶವಾದ ಸೌಂದರ್ಯವೇ ಹೊರತು

ಬಾಹ್ಯವಾದ ವೇಷಭೂಷಣಗಳಲ್ಲ. ತನ್ನ ಅಂತರಾಳದಲ್ಲಿ ನೈಜಭಕ್ತಿಯನ್ನು ಹೊಂದಿರುವವರು ಮಾತ್ರ ಶಿವಪಥವನ್ನು ಅರಿತು ದೇವರ ಕೃಪೆಗೆ ಪಾತ್ರರಾಗುತ್ತಾರೆ. ಇಲ್ಲವಾದಲ್ಲಿ ಸಕಲ ಸಂಪತ್ತುಗಳಿದ್ದರೂ ಬದುಕಲು ಆಯುಷ್ಯವೇ ಇಲ್ಲದಿದ್ದರೆ ಹೇಗೆ ಆ ಬದುಕಿಗೆ ಬೆಲೆಯಿಲ್ಲವೋ ಹಾಗೆ ನಮ್ಮ ಜೀವನವೂ ನಿರರ್ಥಕವಾಗುತ್ತದೆ.

2. ಮರ್ಕಟನ ಕೈಯಲ್ಲಿ ಮಾಣಿಕ್ಯ ವಿದ್ದು ಫಲವೇನು?
   ಉತ್ತರ :
   ಆಯ್ಕೆ : ಪದ್ಯಭಾಗ : ವಚನಗಳು
   ವಚನಕಾರ : ಬಸವಣ್ಣ
   ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಬಸವಣ್ಣನವರು ಹೇಳಿದ್ದಾರೆ.

ಸಂದರ್ಭ : ಶಿವಪಥವನ್ನು ಅರಿತು ಕೊಳ್ಳದ ಲಿಂಗಧಾರಿಗಳು ಡಾಂಭಿಕರು. ಇಂತಹ ಡಾಂಭಿಕರ ಕಪಟ ಭಕ್ತಿಯನ್ನು ಅನೇಕ ದೃಷ್ಟಾಂತಗಳ ಮೂಲಕ ಹೇಳುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ಭಕ್ತನಾದವನಿಗೆ ಬೇಕಾದುದು ಅಂತರಂಗದ ನಿಷ್ಕಲ್ಮಶವಾದ ಸೌಂದರ್ಯವೇ ಹೊರತು ಬಾಹ್ಯವಾದ ವೇಷಭೂಷಣಗಳಲ್ಲ. ತನ್ನ ಅಂತರಾಳದಲ್ಲಿ ನೈಜಭಕ್ತಿಯನ್ನು ಹೊಂದಿರುವವರು ಮಾತ್ರ ಶಿವಪಥವನ್ನು ಅರಿತು ದೇವರ ಕೃಪೆಗೆ ಪಾತ್ರರಾಗುತ್ತಾರೆ. ಇಲ್ಲವಾದಲ್ಲಿ ಮಂಗನ ಕೈಯಲ್ಲಿ ಮಾಣಿಕ್ಯ ವಿದ್ದರೂ ಅದರ ಮೌಲ್ಯವನ್ನು ಮಂಗ ಹೇಗೆ ಅರಿಯಲಾರದೋ ಹಾಗೆಯ ಡಾಂಭಿಕ ಭಕ್ತರ ಭಕ್ತಿಯೂ ನಿರರ್ಥಕ.

3. ಧರೆಹತ್ತಿ ಉರಿದಡೆ ನಿಲಲುಬಾರದು
   ಉತ್ತರ :
   ಆಯ್ಕೆ : ಪದ್ಯಭಾಗ : ವಚನಗಳು
   ವಚನಕಾರ : ಬಸವಣ್ಣ
   ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಬಸವಣ್ಣನವರು ಹೇಳಿದ್ದಾರೆ.

ಸಂದರ್ಭ : ಬಸವಣ್ಣನವರು ತಮ್ಮ ವಚನಗಳಲ್ಲಿ ರಕ್ಷಿಸಬೇಕಾದವರೆ ಭಕ್ಷಕರಾಗುವಂತಾದರೆ ಬಂದೊದಗುವ ಸಂದರ್ಭವನ್ನು ಅನೇಕ ಉದಾಹರಣೆಗಳ ಮೂಲಕ ನಿರೂಪಿಸುವಾಗ ಈ ವಾಕ್ಯ ಬಂದಿದೆ.

ಸ್ವಾರಸ್ಯ : ಪ್ರಕೃತಿಯನ್ನು ರಕ್ಷಿಸುವವನು ದೇವರು. ಒಂದು ವೇಳೆ ಆ ದೇವರೆ ನಮ್ಮನ್ನು ಭಕ್ಷಿಸುವಂತಾದರೆ ನಾವು ಜೀವಿಸಿರಲು ಸಾಧ್ಯವಿಲ್ಲ. ಧರೆಹತ್ತಿ ಉರಿದರೆ ಅಥವಾ ಪ್ರಕೃತಿ ಮುನಿಸಿಕೊಂಡರೆ ನಾವು ಬದುಕಲು ಹೇಗೆ ಸಾಧ್ಯ ? ಆದ್ದರಿಂದ ನಾವು ಅಹಂಕಾರ ಪಡದೆ, ಡಾಂಬಿಕರಾಗದೆ ನೈಜಭಕ್ತರಾಗಿ ಪ್ರಕೃತಿರಹಸ್ಯವನ್ನು ಅರಿತು ಬದುಕಬೇಕೆಂದು ಬಸವಣ್ಣನವರು ಹೇಳಿದ್ದಾರೆ.

4. ತಾಯಿ ಮೊಲೆವಾಲು ನಂಜಾಗಿ ಕೊಲುವಡೆ

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಬಸವಣ್ಣ

ಆಕರ ಗ್ರಂಥ : ಶಿವಶರಣರ ಸಮಗ್ರ ವಚನಸಂಪುಟ.

ಈ ಮೇಲಿನ ಮಾತನ್ನು ಬಸವಣ್ಣನವರು ಹೇಳಿದ್ದಾರೆ.

ಸಂದರ್ಭ : ಬಸವಣ್ಣನವರು ತಮ್ಮ ವಚನಗಳಲ್ಲಿ ರಕ್ಷಿಸಬೇಕಾದವರೆ ಭಕ್ಷಕರಾಗುವಂತಾದರೆ ಬಂದೊದಗುವ ಸಂದರ್ಭವನ್ನು ಅನೇಕ ಉದಾಹರಣೆಗಳ ಮೂಲಕ ನಿರೂಪಿಸುವಾಗ ಈ ವಾಕ್ಯ ಬಂದಿದೆ.

ಸ್ವಾರಸ್ಯ : ಪ್ರಕೃತಿಯನ್ನು ರಕ್ಷಿಸುವವನು ದೇವರು. ಒಂದು ವೇಳೆ ಆ ದೇವರೆ ನಮ್ಮನ್ನು ಭಕ್ಷಿಸುವಂತಾದರೆ ನಾವು ಜೀವಿಸಿರಲು ಸಾಧ್ಯವಿಲ್ಲ. ಹುಟ್ಟುವ ಮಗುವಿಗೆ ತಾಯಿಯ ಎದೆಹಾಲೇ ಆಸರೆ ಆದರೆ ಆ ತಾಯಿಯ ಎದೆಹಾಲೇ ವಿಷವಾದರೆ ಆ ಕಂದಮ್ಮ ಬದುಕಲು ಹೇಗೆತಾನೆ ಸಾಧ್ಯ? ಆದ್ದರಿಂದ ದೈವಲೀಲೆಗಳನ್ನು ಅರಿತು ನಾವು ಅಹಂಕಾರ ಪಡದೆ, ಡಾಂಬಿಕರಾಗದೆ ನೈಜಭಕ್ತರಾಗಿ ಪ್ರಕೃತಿರಹಸ್ಯವನ್ನು ಅರಿತು ಬದುಕಬೇಕೆಂದು ಬಸವಣ್ಣನವರು ಹೇಳಿದ್ದಾರೆ.

ಐದು/ಆರು ವಾಕ್ಯಗಳಲ್ಲಿ ಉತ್ತರಿಸಿರಿ.

1. ಬಸವಣ್ಣನವರ ಪ್ರಕಾರ ನೈಜ ಭಕ್ತಿಯ ಲಕ್ಷಣಗಳಾವವು?

   ಉತ್ತರ : ದೇವ ಮತ್ತು ಭಕ್ತ ಇವರಿಬ್ಬರ ಮನಗಳು ಬೆರೆತಾಗ ತನು ಕರಗಬೇಕು ಅಂದರೆ ಭಕ್ತನಾದವನ ಅಹಂಕಾರ ಕರಗಬೇಕು. ಭಕ್ತನಾದವನು ದೇವ/ಶಿವಲಿಂಗವನ್ನು ಸ್ಪರ್ಶಿಸಿದಾಗ ಭಕ್ತನಾದವನ ದೇಹ ರೋಮಾಂಚನಗೊಳ್ಳುವಂತಿರಬೇಕು. ಯಾವುದೇ ವ್ಯಕ್ತಿಗೆ ಅತ್ಯಂತ ಸಂತೋಷ/ದು:ಖ ಉಂಟಾದಾಗ ಸಹಜವಾಗಿಯೇ ಕಣ್ಣೀರು ಬರುವಂತೆ ಭಕ್ತನಾದವನಿಗೆ ದೇವರನ್ನು ಕಂಡಾಗ ಕಣ್ಣೀರು ಬರುವಂತೆ ಇರಬೇಕು. ದೇವರ ಸ್ತುತಿ, ಶ್ಲೋಕ ಇತ್ಯಾದಿ ಪಠಣ ಮಾಡುವುದರ ಮೂಲಕ ಭಕ್ತನಾದವನ ಗಂಟಲು ಗದ್ಗದವಾಗುವಂತಿರಬೇಕು. ಇವೆಲ್ಲವೂ ನೈಜ ಭಕ್ತಿಯ ಲಕ್ಷಣಗಳು ಎಂದು ಬಸವಣ್ಣನವರು ಹೇಳಿದ್ದಾರೆ.

2. ಶಿವಪಥವನ್ನು ಅರಿಯದವರ ಭಕ್ತಿ ನಿರರ್ಥಕವೆಂಬುದನ್ನು ಬಸವಣ್ಣ ಯಾವಯಾವ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

   ಉತ್ತರ : ಮಾನವನಿಗೆ ಶ್ರೀಮಂತಿಕೆ ಇದ್ದರೆ ಮಾತ್ರ ಸಾಲದು ಅದರ ಜೊತೆಗೆ ಅದನ್ನು ಅನುಭವಿಸಲು ಆಯುಷ್ಯವೂ ಹೇಗೆ ಮುಖ್ಯವೋ ಒಬ್ಬ ಹೇಡಿಯಾದವನ ಕೈಯಲ್ಲಿ ಚಂದ್ರಾಯುಧ ವಿದ್ದರೆ ಹೇಗೆ ಅದು ನಿಷ್ಪ್ರಯೋಜಕವೋ, ಕುರುಡನ ಕೈಯಲ್ಲಿ ಕನ್ನಡಿ ಇದ್ದರೆ ಅವನಿಗೆ ಹೇಗೆ ಲಾಭವಿಲ್ಲವೋ, ಮಂಗನಕೈಯಲ್ಲಿ ಮಾಣಿಕ್ಯದಂತಹ ಬೆಲೆಬಾಳುವ ಲೋಹವಿದ್ದರೂ ಆ ಮಂಗನಿಗೆ ಅದರ ಬೆಲೆ ತಿಳಿಯಲಾರದೋ ಹಾಗೆಯೇ ಶಿವಪಥ (ಸತ್ಪಥ/ಸನ್ಮಾರ್ಗ/ನೈಜ ಭಕ್ತನಪಥ) ವನ್ನರಿಯದವನ ಕೈಯಲ್ಲಿ ಲಿಂಗವಿದ್ದರೆ ಯಾವ ಪ್ರಯೋಜನವೂ ಇಲ್ಲ. ಭಕ್ತನಾದವನಿಗೆ ಬೇಕಾದುದು ಅಂತರಂಗದ ನಿಷ್ಕಲ್ಮಶವಾದ ಸೌಂದರ್ಯವೇ ಹೊರತು ಬಾಹ್ಯವಾದ ವೇಷಭೂಷಣಗಳಲ್ಲ. ತನ್ನ ಅಂತರಾಳದಲ್ಲಿ ನೈಜಭಕ್ತಿಯನ್ನು ಹೊಂದಿರುವವರು ಮಾತ್ರ ಶಿವಪಥವನ್ನು ಅರಿತು ದೇವರ ಕೃಪೆಗೆ ಪಾತ್ರರಾಗುತ್ತಾರೆ. ಎಂಬು ಬಸವಣ್ಣನವರ ಅಭಿಮತವಾಗಿದೆ.

3. ರಕ್ಷಿಸಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ ?

ಉತ್ತರ :

ರಕ್ಷಕರಾದವರೇ ಭಕ್ಷಕರಾದರೆ ನಮ್ಮನ್ನು ರಕ್ಷಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬುದನ್ನು ಅನೇಕ ದೃಷ್ಟಾಂತಗಳಿಂದ ವಿವರಿಸಿದ್ದಾನೆ. ಮನೆಯಲ್ಲಿರುವ ಒಲೆಯು ಹತ್ತಿ ಉರಿಯುತ್ತಿರುವಾಗ ಅದರ ಶಾಖವನ್ನು ಸಹಿಸಿಕೊಳ್ಳಬಹುದು. ಆದರೆ ಭೂಮಿಯೇ ಹೊತ್ತಿ ಉರಿದರೆ! ನಾವು ಜೀವಿಸಲು ಸಾಧ್ಯವೇ? ನೀರನ್ನು ಸಂಗ್ರಹಿಸಲು ಮಾಡಿದ ಕಟ್ಟೆ(ಮಣ್ಣಿನದಿಬ್ಬ)ಯೇ ನೀರನ್ನು ಕುಡಿದರೆ!, ಬೆಳೆಗಳನ್ನು ರಕಿಸಲೆಂದು ಮಾಡಿದ ಬೇಲಿಯೆ ಪೈರುಗಳನ್ನು ತಿಂದರೆ!, ಹಸುಳೆಗೆ ತನ್ನ ತಾಯಿಯ ಎದೆಹಾಲೇ ವಿಷವಾದರೆ !, ಗೃಹಿಣಿಯಾದವಳು ತನ್ನ ಮನೆಯಲ್ಲಿ ಕಳ್ಳತನ ಮಾಡಿದರೆ !,

ಹಾಗೆಯೆ ರಕ್ಷಿಸಬೇಕಾದ ದೇವರೇ ನಮಗೆ ಕಷ್ಟ ಕೊಟ್ಟರೆ ನಾವು ಯಾರಲ್ಲಿ ನಮ್ಮ ಕಷ್ಟಗಳನ್ನು ಹೇಳಿಕೊಳ್ಳಬೇಕು. ಮೇಲಿನ ಎಲ್ಲ ದೃಷ್ಟಾಂತಗಳೂ ಅಸಾಧ್ಯವಾದವುಗಳು. ಒಂದು ವೇಳೆ ಅವು ಸಾಧ್ಯವಾಗುವಂತಾದರೆ ನಮಗೆ ಜೀವಿಸಿರಲು ಖಂಡಿತ ಸಾಧ್ಯವಿಲ್ಲ. ಈ ವಿಚಾರವನ್ನು ಅರಿತು ನಾವು ಅಹಂಕಾರ ಪಡದೆ, ಡಾಂಬಿಕರಾಗದೆ ನೈಜಭಕ್ತರಾಗಿ ಪ್ರಕೃತಿರಹಸ್ಯವನ್ನು ಅರಿತು ಬದುಕಬೇಕು

## ಭಾಷಾಭ್ಯಾಸ :

ನಾನಾರ್ಥ ಪದಗಳು :

1. ಅರ್ಥ : ಒಂದು ಅರ್ಥದಲ್ಲಿ : ಸಂಪತ್ತು/ಹಣಕಾಸು
   ಇನ್ನೊಂದು ಅರ್ಥದಲ್ಲಿ : ಶಬ್ದದ ಅಭಿಪ್ರಾಯ
2. ಹತ್ತಿ : ಒಂದು ಅರ್ಥದಲ್ಲಿ : ಮೇಲೇರಿ
   ಇನ್ನೊಂದು ಅರ್ಥದಲ್ಲಿ : ಅರಳೆ
3. ಏರಿ : ಒಂದು ಅರ್ಥದಲ್ಲಿ : ಕೆರೆಯದಂಡೆ
   ಇನ್ನೊಂದು ಅರ್ಥದಲ್ಲಿ : ಹೊರಿಸು

ಸಮಾನಾರ್ಥಕ ಪದಗಳು :

ಡಂಬಕ : ಬೂಟಾಟಿಕೆಯವ, ಆಡಂಬರದವ

ಹಂದೆ :ಹೇಡಿ, ಪುಕ್ಕಲುತನದವ

ಮರ್ಕಟ : ಮಂಗ , ಕೋತಿ, ಕಪಿ, ವಾನರ.

ನಂಜು : ವಿಷ, ಪಾಷಾಣ.

## ಉರಿಲಿಂಗಪೆದ್ದಿಯ ವಚನಗಳು

ಸಾರಾಂಶ :

ಮೊದಲನೆಯ ವಚನ : ಸಕಲ ಮತ್ತು ನಿಷ್ಕಲಗಳ ಪರಸ್ಪರ ಸಂಬಂಧ ಕುರಿತು ಹೇಳುತ್ತದೆ.

ಸಕಲ(ಸಾಕಾರ, ಶಿವಲಿಂಗ,ಗೋಚರ ಜಗತ್ತು ಎನ್ನುವ ಅರ್ಥಗಳಲ್ಲಿ) ಮತ್ತು ನಿಷ್ಕಲ( ನಿರಾಕಾರ, ಶಿವ, ಅಗೋಚರ ಜಗತ್ತು ಎನ್ನುವ ಅರ್ಥಗಳಲ್ಲಿ) ಗಳು ಪರಸ್ಪರ ಬೇರೆಯಲ್ಲ , ಪೂರಕ ಎಂಬುದನ್ನು ಉದಾಹರಣೆಗಳ ಮೂಲಕ ಉರಿಲಿಂಗಪೆದ್ದಿಯು ನಿರೂಪಿಸುತ್ತಾನೆ. ಸೂರ್ಯನಿಲ್ಲದೆ ಹಗಲಾಗಲು ಸಾಧ್ಯವಿಲ್ಲ, ದೀಪವಿಲ್ಲದೆ ಬೆಳಕುಂಟಾಗಲು ಸಾಧ್ಯವಿಲ್ಲ, ಪುಷ್ಪಗಳಿಲ್ಲದೆ ಪರಿಮಳ ಉಂಟಾಗಲು ಸಾಧ್ಯವಿಲ್ಲ, ಸಕಲವಿಲ್ಲದೆ ನಿಷ್ಕಲ ಕಾಣಲು ಸಾಧ್ಯವಿಲ್ಲ. ಅತಿಶ್ರೇಷ್ಠವಾದ ವಿಚಾರವು ಶಿವನಿಂದ ಮಾತ್ರ ತೋರಲು ಸಾಧ್ಯ ಎನ್ನುತ್ತಾನೆ.

DPUE

ವಿಮರ್ಶೆ : ಶಿವ ಮತ್ತು ಶಿವರೂಪಿಯಾದ ಲಿಂಗ ಎರಡೂ ಕೂಡ ಮುಖ್ಯವಾದವುಗಳು. ಶಿವಲಿಂಗಕ್ಕೆ ಶಕ್ತಿ ತುಂಬುವವನು ಶಿವ. ಆದ್ದರಿಂದ ಅವೆರಡೂ ಪರಸ್ಪರ ಅಂತರ್ ಸಂಬಂಧಿಗಳು. ಕಾರ್ಯಕಾರಣ ಸಂಬಂಧ ಹೊಂದಿವೆ. ಸೂರ್ಯ ಹಗಲಿಗೆ ಕಾರಣ, ಬೆಳಕಿಗೆ ದೀಪ ಕಾರಣ, ಪರಿಮಳಕ್ಕೆ ಪುಷ್ಪಕಾರಣ ವಾದಂತೆ ಶಿವಲಿಂಗಕ್ಕೆ ಶಿವನೆ ಕಾರಣ ಎಂದು ಹೇಳಿದ್ದಾನೆ. ಅದರ ಶ್ರೇಷ್ಠತೆಯುನ್ನು ಅರಿತು ಬಾಳಬೇಕೇನ್ನುತ್ತಾನೆ.

ಎರಡನೆಯ ವಚನ : ಇಷ್ಟಲಿಂಗದ ಮಹತ್ವವನ್ನು ಸಾರುತ್ತದೆ.

ಮುಟ್ಟಿದ್ದೆಲ್ಲಾ ಚಿನ್ನವಾಗಿಸುವ ಶಿಲೆಯಿಂದ ನಿರ್ಮಿಸಿರುವ ಮನೆಯಲ್ಲಿ ವಾಸವಾಗಿರುವ ವ್ಯಕ್ತಿ ಭಿಕ್ಷೆಗಾಗಿ ಅಲೆಯುವುದಿಲ್ಲ. ನೀರಿನ ತೊರೆಯಲ್ಲಿ ಇರುವವನು ಬಾಯಾರಿಕೆಯಾಯಿತೆಂದು ಕೆರೆಯನೀರನ್ನು ಹುಡುಕುವುದಿಲ್ಲ. ಪುಣ್ಯಕರವಾದ ಲಿಂಗ (ಇಷ್ಟ ಲಿಂಗ) ವನ್ನು ತನ್ನ ದೇಹದಮೇಲೆ ಧರಿಸಿರುವವನು ಅನ್ಯಲಿಂಗಕ್ಕಾಗಿ ಹುಡುಕಾಡುವುದಿಲ್ಲ.

ವಿಮರ್ಶೆ : ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದ ಮೇಲೆ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಇಷ್ಟಲಿಂಗ ಧಾರಣೆ ಮಾಡಿರುವ ಭಕ್ತನು ತಾನು ಧರಿಸಿರುವ ಲಿಂಗದಲ್ಲಿಯೇ ನಿಷ್ಕಲಗುಣರೂಪಿಯಾದ ಶಿವನನ್ನು ಕಾಣುತ್ತಾನೆ ಎಂದು ಉರಿಲಿಂಗಪೆದ್ದಿ ಹೇಳುತ್ತಾನೆ.

ಮೂರನೆಯ ವಚನ : ಗುರು–ಲಘು ಇವರ ಲಕ್ಷಣಗಳನ್ನು ಕುರಿತು  ಹೇಳಿದ್ದಾನೆ.

ಗುರುವಾದವನು ಗರುವಾಗಿಯೇ ಇರಬೇಕು, ಲಘುವಾದವನು ಲಘುವಾಗಿಯೇ ಇರಬೇಕು, ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ( ಸಣ್ಣತನದಿಂದ ವರ್ತಿಸಿದರೆ ) ತನ್ನ ಗೌರವ, ಸ್ಥಾನಮಾನ ಕಳೆದುಕೊಳ್ಳುತ್ತಾನೆ. ಗುರು–ಲಿಂಗ–ಜಂಗಮ ಇವು ಬಹಳ ಶೇಷ್ಠ ವಾದವುಗಳು. ಈ ತ್ರಿವಿಧವನ್ನು ಲಘುವಾಗಿ ಕಂಡವನು ತಾನೇ ಲಘುವಾಗುತ್ತಾನೆ.

ವಿಮರ್ಶೆ :: ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮ (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವಿದೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು.

ಒಂದು ವಾಕ್ಯದಲ್ಲಿ ಉತ್ತರಿಸಿ.

1. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?
   ಉತ್ತರ :  ಉರಿಲಿಂಗಪೆದ್ದಿಯ ವಚನಗಳ ಅಂಕಿತ ‘ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ’
2. ಯಾವುದರಿಂದ ಪರಿಮಳವನ್ನು ಅರಿಯಬಹುದು ?
   ಉತ್ತರ : ಪುಷ್ಪರಿಂದ ಪರಿಮಳವನ್ನು ಅರಿಯಬಹುದು.
3. ಯಾರು ಅನ್ಯಲಿಂಗವನ್ನು ನೆನೆಯುವುದಿಲ್ಲ?
   ಮಂಗಳಲಿಂಗವನ್ನು ಅಂಗದ ಮೇಲೆ ಧರಿಸಿರುವವನು ಅನ್ಯಲಿಂಗವನ್ನು ನೆನೆಯುವುದಿಲ್ಲ.
4. ಗುರು ಹೇಗೆ ವರ್ತಿಸಬಾರದು ?
   ಗುರು ಲಘುವಾಗಿ ವರ್ತಿಸಬಾರದು .

ಎರಡು ಅಂಕದ ಪ್ರಶ್ನೆಗಳು

1. ಸೂರ್ಯ ಮತ್ತು ಬೆಳಕಿನಿಂದಾಗುವ ಪ್ರಯೋಜನಗಳಾವವು?
   ಉತ್ತರ : ಸೂರ್ಯನಿಂದ ಹಗಲು ಉಂಟಾಗುತ್ತದೆ. ದೀಪದಿಂದ ಬೆಳಕು ಉಂಟಾಗುತ್ತದೆ. ಇವು ಸೂರ್ಯ ಮತ್ತು ಬೆಳಕಿನ ಪ್ರಯೋಜನಗಳಾಗಿವೆ.

2. ಯಾರು ಮನೆಮನೆಉನ್ನು ತಿರಿಯನು? ಕೆರೆಯುದಕನ್ನರಸದವನು ಯಾರು?
   ಉತ್ತರ :  ಮುಟ್ಟಿದ್ದೆಲ್ಲಾ ಚಿನ್ನವಾಗಿಸುವ ಶಿಲೆಯಿಂದ ನಿರ್ಮಿಸಿರುವ ಮನೆಯಲ್ಲಿ ವಾಸವಾಗಿರುವ ವ್ಯಕ್ತಿ ಭಿಕ್ಷೆಗಾಗಿ ಅಲೆಯುವುದಿಲ್ಲ. ನೀರಿನ ತೊರೆಯಲ್ಲಿ ಇರುವವನು ಬಾಯಾರಿಕೆಯಾಯಿತೆಂದು ಕೆರೆಯನೀರನ್ನು ಹುಡುಕುವುದಿಲ್ಲ.

DRAFT

3. ಗುರುವಿನ ಲಕ್ಷಣಗಳಾವವು ?
   ಗುರುವಾದವನು ಗರುವಾಗಿಯೇ ಇರಬೇಕು, ಲಘುವಾದವನು ಲಘುವಾಗಿಯೇ ಇರಬೇಕು, ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ( ಸಣ್ಣತನದಿಂದ ವರ್ತಿಸಿದರೆ ) ತನ್ನ ಗೌರವ, ಸ್ಥಾನಮಾನ, ಮರ್ಯಾದೆ ಕಳೆದುಕೊಳ್ಳುತ್ತಾನೆ.

ಐದು/ಆರು ವಾಕ್ಯಗಳಲ್ಲಿ ಉತ್ತರಿಸಿ.

1. ಮಂಗಳಲಿಂಗದ ಮಹತ್ವವನ್ನು ಹೇಗೆ ವಿವರಿಸಲಾಗಿದೆ ?

ಉತ್ತರ : ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದಲ್ಲಿ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಇಷ್ಟಲಿಂಗ ಧಾರಣೆ ಮಾಡಿರುವ ಭಕ್ತನು ತಾನು ಧರಿಸಿರುವ ಲಿಂಗದಲ್ಲಿಯೇ ನಿಷ್ಕಲಗುಣರೂಪಿಯಾದ ಶಿವನನ್ನು ಕಾಣುತ್ತಾನೆ ಎಂದು ಉರಿಲಿಂಗಪೆದ್ದಿ ಹೇಳುತ್ತಾನೆ. ಮುಟ್ಟಿದ್ದೆಲ್ಲಾ ಚಿನ್ನವಾಗಿಸುವ ಶಿಲೆಯಿಂದ ನಿರ್ಮಿಸಿರುವ ಮನೆಯಲ್ಲಿ ವಾಸವಾಗಿರುವ ವ್ಯಕ್ತಿ ಭಿಕ್ಷೆಗಾಗಿ ಅಲೆಯುವುದಿಲ್ಲವೋ, ನೀರಿನ ತೊರೆಯಲ್ಲಿ ಇರುವವನು ಬಾಯಾರಿಕೆಯಾಯಿತೆಂದು ಕೆರೆಯನೀರನ್ನು ಹುಡುಕುವುದಿಲ್ಲವೋ ಹಾಗೆಯೇ ಪುಣ್ಯಕರವಾದ ಲಿಂಗ (ಇಷ್ಟ ಲಿಂಗ) ವನ್ನು ತನ್ನ ದೇಹದಮೇಲೆ ಧರಿಸಿರುವವನು ಅನ್ಯಲಿಂಗಕ್ಕಾಗಿ ಹುಡುಕಾಡುವುದಿಲ್ಲ. ಆ ಇಷ್ಟಲಿಂಗದಲ್ಲಿಯೇ ಶಿವನ ಸವಸ್ವರೂಪವನ್ನು ಕಂಡು ಸದಾಚಾರಿಯಾಗಿ ಬದುಕುತ್ತಾನೆನ್ನುವುದು ಉರಿಲಿಂಗಪೆದ್ದಿಯ ಅಭಿಪ್ರಾಯವಾಗಿದೆ.

2. ಗುರುಲಘುವರ್ತನದಲ್ಲಿ ವರ್ತಿಸಬಾರದೇಕೆ ?

ಉತ್ತರ : ಗುರುವಾದವನು ಗರುವಾಗಿಯೇ ಇರಬೇಕು, ಲಘುವಾದವನು ಲಘುವಾಗಿಯೇ ಇರಬೇಕು, ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ( ಸಣ್ಣತನದಿಂದ ವರ್ತಿಸಿದರೆ ) ತನ್ನ ಗೌರವ, ಸ್ಥಾನಮಾನ ಕಳೆದುಕೊಳ್ಳುತ್ತಾನೆ. ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮ (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವಿದೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು. ಗುರುವಾದವನ ಸ್ಥಾನ ಎಲ್ಲಕ್ಕಿಂತಲೂ ಮಿಗಿಲಾದುದು. ಭಕ್ತಮತ್ತು ದೇವರ ಕೊಂಡಿಯಾಗಿ ಕೆಲಸಮಾಡುತ್ತಾನೆ. ಒಂದು ವೇಳೆ ಗುರುವಾದವನು ಲಘುವಾಗಿ ವರ್ತಿಸಿದರೆ ಸಂಪೂರ್ಣ ವ್ಯವಸ್ಥೆಯೆ ನಾಶವಾಗಿ ಹೋಗುತ್ತದೆ. ಸಮಾಜವನ್ನು ತಿದ್ದಿತೀಡಿ ಸರಿಪಡಿಸಬೇಕಾದ ಕಾರ್ಯದಲ್ಲಿ ಗುರುವಿನ ಸ್ಥಾನ ಮಹತ್ತರವಾದುದು ಆದ್ದರಿಂದ ಗುರು ಲಘುವಾಗಿ ವರ್ತಿಸಬಾರದು.

3. ಉರಿಲಿಂಗ ಪೆದ್ದಿಯ ವಚನಗಳಲ್ಲಿಯ ಆಶಯ ವೇನು ?

ಶಿವ ಮತ್ತು ಶಿವರೂಪಿಯಾದ ಲಿಂಗ ಎರಡೂ ಕೂಡ ಮುಖ್ಯವಾದವುಗಳು. ಶಿವಲಿಂಗಕ್ಕೆ ಶಕ್ತಿ ತುಂಬುವವನು ಶಿವ. ಆದ್ದರಿಂದ ಅವೆರಡೂ ಪರಸ್ಪರ ಅಂತರ್ ಸಂಬಂಧಿಗಳು. ಕಾರ್ಯಕಾರಣ ಸಂಬಂಧ ಹೊಂದಿವೆ. ಸೂರ್ಯ ಹಗಲಿಗೆ ಕಾರಣ, ಬೆಳಕಿಗೆ ದೀಪ ಕಾರಣ, ಪರಿಮಳಕ್ಕೆ ಪುಷ್ಪಕಾರಣ ವಾದಂತೆ ಶಿವಲಿಂಗಕ್ಕೆ ಶಿವನೆ ಕಾರಣ ಎಂದು ಹೇಳಿದ್ದಾನೆ. ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದ ಮೇಲೆ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಇಷ್ಟಲಿಂಗ ಧಾರಣೆ ಮಾಡಿರುವ ಭಕ್ತನು ತಾನು ಧರಿಸಿರುವ ಲಿಂಗದಲ್ಲಿಯೇ ನಿಷ್ಕಲಗುಣರೂಪಿಯಾದ ಶಿವನನ್ನು ಕಾಣುತ್ತಾನೆ ಎಂದು ಉರಿಲಿಂಗಪೆದ್ದಿ ಹೇಳುತ್ತಾನೆ. ಗುರು–ಲಿಂಗ–ಜಂಗಮ (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವನ್ನು ನೀಡಿದ್ದಾನೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು. ಘುರುವಾದವನು ಎಂದೂ ಲಘುವಾಗಿ ವರ್ತಿಸಬಾರದೆನ್ನುತ್ತಾನೆ.

ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯಿರಿ.

1. ಪುಷ್ಪವಿಲ್ಲದೆ ಪರಿಮಳವನರಿಯಬಹುದೆ.

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಉರಿಲಿಂಗಪೆದ್ದಿಯ ವಚನಗಳು
ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಉರಿಲಿಂಗ ಪೆದ್ದಿ ಹೇಳಿದ್ದಾನೆ.

ಸಂದರ್ಭ : ಮಹಾ ಘನವಾದ ಶಿವನಿಂದಲೇ ಶಿವಲಿಂಗಕ್ಕೆ ಚೈತನ್ಯ ವಿದೆ ಎಂಬುದನ್ನು ದೃಷ್ಟಾಂತಗಳ ಮೂಲಕ ನಿರೂಪಿಸುವಾಗ ಉರಿಲಿಂಗ ಪೆದ್ದಿ ಈ ರೀತಿ ಹೇಳಿದ್ದಾನೆ.

ಸ್ವಾರಸ್ಯ : ಶಿವ ಮತ್ತು ಶಿವಲಿಂಗ ಪರಸ್ಪರ ಅಭಿನ್ನವಾದವುಗಳು, ಕಾರ್ಯ ಕಾರಣ ಸಂಬಂಧಗಳನ್ನು ಹೊಂದಿವೆ. ಈ ತತ್ವವನ್ನು ಪರಿಮಳಕ್ಕೆ ಪುಷ್ಪವು ಕಾರಣವಾದಂತೆ ಸಕಲ(ಶಿವಲಿಂಗ) ಕ್ಕೆ ನಿಷ್ಕಲ(ಶಿವ) ವೇ ಕಾರಣ ಎಂದು ದೃಷ್ಟಾಂತೀಕರಿಸಿದ್ದಾನೆ.

2. ಅನ್ಯ ಲಿಂಗಗಳ ನೆನೆವನೆ ನಿಮ್ಮ ಭಕ್ತನು.

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಉರಿಲಿಂಗಪೆದ್ದಿಯ ವಚನಗಳು

ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಉರಿಲಿಂಗ ಪೆದ್ದಿ ಹೇಳಿದ್ದಾನೆ.

ಸಂದರ್ಭ : ಉರಿಲಿಂಗಪೆದ್ದಿಯು ವೀರಶೈವರು ತಮ್ಮ ದೇಹದ ಮೇಲೆ ಧರಿಸುವ ಇಷ್ಟ ಲಿಂಗದ ಮಹತ್ವವನ್ನು ವಿವರಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ : ವೀರಶೈವ ಧರ್ಮದಲ್ಲಿ ಭಕ್ತರು ತಮ್ಮ ದೇಹದಲ್ಲಿ ಶಿವನ ಪ್ರತೀಕವಾಗಿ ಇಷ್ಟಲಿಂಗ ಧಾರಣೆಮಾಡುತ್ತಾರೆ. ಪೂಣ್ಯಕರವಾದ ಲಿಂಗ (ಇಷ್ಟ ಲಿಂಗ) ವನ್ನು ತನ್ನ ದೇಹದಮೇಲೆ ಧರಿಸಿರುವವನು ಅನ್ಯಲಿಂಗಕ್ಕಾಗಿ ಹುಡುಕಾಡುವುದಿಲ್ಲ. ಆ ಇಷ್ಟಲಿಂಗದಲ್ಲಿಯೇ ಶಿವನ ಸವಸ್ವರೂಪವನ್ನು ಕಂಡು ಸದಾಚಾರಿಯಾಗಿ ಬದುಕುತ್ತಾನೆನ್ನುವುದು ಉರಿಲಿಂಗಪೆದ್ದಿಯ ಅಭಿಪ್ರಾಯವಾಗಿದೆ.

3. ತಾನೆ ಲಘುಮಾಡಿ ಲಘುವಾದನಯ್ಯ

ಉತ್ತರ :

ಆಯ್ಕೆ : ಪದ್ಯಭಾಗ : ವಚನಗಳು

ವಚನಕಾರ : ಉರಿಲಿಂಗಪೆದ್ದಿ

ವಚನಗಾರ : ಉರಿಲಿಂಗಪೆದ್ದಿಯ ವಚನಗಳು

ಆಕರ ಗ್ರಂಥ : ಶಿವಶರಣರ ಸಮಗ್ರ ವಚನ ಸಂಪುಟ.

ಈ ಮೇಲಿನ ಮಾತನ್ನು ಉರಿಲಿಂಗ ಪೆದ್ದಿ ಹೇಳಿದ್ದಾನೆ.

ಸಂದರ್ಭ : ಉರಿಲಿಂಗ ಪೆದ್ದಿಯು ಗುರುವಿನ ಲಕ್ಷಣಗಳನ್ನು ಹೇಳುವಾಗ ಗುರು–ಲಿಂಗ–ಜಂಗಮ (ತ್ರಿವಿಧ)ಗಳ ವಿಚಾರವಾಗಿ ಪ್ರಸ್ತಾಪಿಸುತ್ತಾನ ಆಸಂದರ್ಭದಲ್ಲಿ ಬರುವ ಮಾತಾಗಿದೆ.

ಸ್ವಾರಸ್ಯ: ವೀರಶೈವ ಧರ್ಮದಲ್ಲಿ ಗುರು–ಲಿಂಗ–ಜಂಗಮು (ಶಿಕ್ಷಕ–ದೇವರು–ಭಕ್ತ) ಈ ಮೂರು ತತ್ವಗಳಿಗೆ ತುಂಬಾ ಮಹತ್ವದ ಸ್ಥಾನವಿದೆ. ಇವು ತ್ರಿಧಗಳು ಎಂದು ಪ್ರಸಿದ್ಧಿ ಪಡೆದಿವೆ. ಇವುಗಳನ್ನು ಯಾರೂ ಲಘುವಾಗಿ ತಿಳಿಯಬಾರದು. ಯಾರು ಲಘುವಾಗಿ ಭಾವಿಸುತ್ತಾರೋ ಅವರೇ ಲಘುವಾಗುತ್ತಾರೆ ಎನ್ನುವುದು ಉರಿಲಿಂಗ ಪೆದ್ದಿಯ ಅಭಿಪ್ರಾಯವಾಗಿದೆ.

## <u>ಭಾಷಾಭ್ಯಾಸ</u>

ನಾನಾರ್ಥ ಪದಗಳು :

ತೊರೆ : ಒಂದು ಅರ್ಥದಲ್ಲಿ : ಹರಿವ ನೀರು
ಇನ್ನೊಂದು ಅರ್ಥದಲ್ಲಿ : ಬಿಡು/ತ್ಯಜಿಸು

2 ನೆನೆ : ಒಂದು ಅರ್ಥದಲ್ಲಿ : ಸ್ಮರಿಸು
ಇನ್ನೊಂದು ಅರ್ಥದಲ್ಲಿ : ಒದ್ದೆಯಾಗು

3 ಲಘು : ಒಂದು ಅರ್ಥದಲ್ಲಿ : ಚಿಕ್ಕದು
ಇನ್ನೊಂದು ಅರ್ಥದಲ್ಲಿ : ಹಗುರ

4 ಗುರು : ಒಂದು ಅರ್ಥದಲ್ಲಿ : ಹಿರಿದು
ಇನ್ನೊಂದು ಅರ್ಥದಲ್ಲಿ : ಶಿಕ್ಷಕ

ಸಮಾನಾರ್ಥಕ ಪದಗಳು :

ದೀಪ : ಜ್ಯೋತಿ, ಪ್ರಣತಿ, ಹಣತೆ

ಪುಷ್ಪ : ಹೂವು, ಕುಸುಮ, ಸುಮ.

ಗೃಹ : ಮನೆ , ಆಲಯ, ನಿವಾಸ

*************